## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 303(348) |
| ಸದಸ್ಯರ ಹೆಸರು | : ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 29.01.2026 |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕ್ರೀಡೆಯಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳ ನೇಮಕಾತಿಗೆ ಕ್ರೀಡಾ ಮೀಸಲಾತಿ ಕಲ್ಪಿಸಲಾಗಿದೆಯೇ; ಕಲ್ಪಿಸಿದಲ್ಲಿ ಯಾವ ಇಲಾಖೆಗಳಲ್ಲಿ ಎಷ್ಟು ಮೀಸಲಾತಿ ಕಲ್ಪಿಸಿ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ; ಹುದ್ದೆಗಳ ದರ್ಜೆ ಮತ್ತು ಪದನಾಮ ಸಹಿತ ವಿವರ ನೀಡುವುದು; | **ಹೌದು**<br><br>**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**<br><br>**1.**ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 204 ಸೇನೆನಿ 2022, ದಿನಾಂಕ 21-03-2023 ರನ್ವಯ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೆಲವು ಹುದ್ದೆಗಳಿಗೆ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ವ್ಯಕ್ತಿಗಳ ನೇಮಕಾತಿ) (ವಿಶೇಷ) ನಿಯಮಗಳು, 2023 ರಲ್ಲಿ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಗೇಮ್ಸ್ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ ವೃಂದ ಹಾಗೂ ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಗುಂಪು-ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ (ಗುಂಪು-ಸಿ ಮತ್ತು ಗುಂಪು-ಡಿ) ವಿದ್ಯಾರ್ಹತೆ ಅನುಸಾರ ನೇಮಕಾತಿಗೆ ಅವಕಾಶ ಕಲ್ಪಿಸಿ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ.<br><br>**2.**ವಿಶೇಷ ನೇಮಕಾತಿ ನಿಯಮಗಳಡಿ ಸರ್ಕಾರವು ಅಧಿಸೂಚಿಸಿದ ಒಂಬತ್ತು ಇಲಾಖೆಗಳಲ್ಲಿ ಗ್ರೂಪ್-ಎ ವೃಂದಗಳಲ್ಲಿನ ಐದು ಹುದ್ದೆಗಳು; ಹದಿನೈದು ಇಲಾಖೆಗಳಲ್ಲಿ ಪ್ರತಿಯೊಂದು ವೃಂದದಲ್ಲಿನ ತಲಾ ಐದು ಗ್ರೂಪ್-ಬಿ ಹುದ್ದೆಗಳು ಮತ್ತು ರಾಜ್ಯದ ಯಾವುದೇ ಸಿವಿಲ್ ಸೇವೆಯಲ್ಲಿನ ಪ್ರತಿಯೊಂದು ವೃಂದದಲ್ಲಿ ಒಳಗೊಂಡ, ಯಾವುದೇ ಗರಿಷ್ಠ ಮಿತಿ ಇಲ್ಲದೇ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br><br>**3.**ರಾಜ್ಯ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್ ವೆಲ್ತ್ ಗೇಮ್ಸ್ ಗಳಲ್ಲಿ ಪದಕ ವಿಜೇತ ಸಾಧಕ ಕ್ರೀಡಾಪಟುಗಳಿಗೆ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ, ಗುಂಪು-ಬಿ ಮತ್ತು ಇತರೆ ಹುದ್ದೆಗಳಿಗೆ ವಿಶೇಷ ನೇಮಕಾತಿಯಡಿ ಒಟ್ಟು 13 ಕ್ರೀಡಾಪಟುಗಳಿಗೆ ಅವಕಾಶ ಪತ್ರ (Offer Letter) ಗಳನ್ನು ವಿತರಿಸಲಾಗಿದೆ. ಈ ಪೈಕಿ ಹನ್ನೊಂದು (11) ಕ್ರೀಡಾಪಟುಗಳನ್ನು ವಿವಿಧ ಇಲಾಖೆಗಳಲ್ಲಿ ಗುಂಪು-ಬಿ ವೃಂದದ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. |
| ಆ) | ಯಾವ ವರ್ಷದಿಂದ ಸದರಿ ಮೀಸಲಾತಿಯನ್ನು ಪ್ರಾರಂಭಿಸಲಾಗಿದೆ ಮತ್ತು ಕ್ರೀಡಾ ಕೋಟಾದಡಿ ನೇಮಕಾತಿಗೊಳ್ಳಲು ಇರಬೇಕಾದ ವಿವಿಧ ಅರ್ಹತೆ ಮತ್ತು ನೇಮಕಾತಿ ಮಾನದಂಡವೇನು; | |
| ಇ) | ಕ್ರೀಡಾ ಕೋಟಾದಡಿ ವಿವಿಧ ಇಲಾಖೆಗಳಿಗೆ ಮಂಜೂರಾದ ವಿವಿಧ ದರ್ಜೆಯ ಒಟ್ಟು ಹುದ್ದೆಗಳು ಎಷ್ಟು; ಭರ್ತಿಯಾದ ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು; ಕ್ರೀಡಾ ಕೋಟಾದಲ್ಲಿ ಇವರೆಗೆ ನೇಮಿಸಿದ ವಿವಿಧ ದರ್ಜೆಯ ಹುದ್ದೆಗಳು ಎಷ್ಟು; ಸದರಿ ಕೋಟಾದಡಿ ನೇಮಕಗೊಂಡವರ ಕ್ರೀಡಾ ಸಾಧನೆಗಳು ಏನು; (ಸಂಪೂರ್ಣ ವಿವರ ನೀಡುವುದು) | |

4. ವಿಶೇಷ ನೇಮಕಾತಿ ನಿಯಮಗಳಡಿ ಗುಂಪು-ಬಿ ವೃಂದದ ಹುದ್ದೆಗಳಿಗೆ ನೇಮಕಗೊಂಡ ಕ್ರೀಡಾಪಟುಗಳ ಸಾಧನೆ ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.

5. ಪೊಲೀಸ್ ಇಲಾಖೆಯಲ್ಲಿ ಡಿವೈಎಸ್‌ಪಿ, ಸಬ್-ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೇಬಲ್ ವೃಂದದ ನೇರ ನೇಮಕಾತಿಯಲ್ಲಿ ಶೇಕಡ 3 ರಷ್ಟು ಹುದ್ದೆಗಳನ್ನು ಕ್ರೀಡಾ ಸಾಧಕರಿಗೆ ಮೀಸಲಿಡಲಾಗಿದೆ. ಅರಣ್ಯ ಇಲಾಖೆಯಲ್ಲಿ ಶೇಕಡ 3 ರಷ್ಟು ಮೀಸಲಾತಿ ಜಾರಿಗೊಳಿಸಲು ಹಾಗೂ ರಾಜ್ಯ ಸಿವಿಲ್ ಸೇವೆಗಳಲ್ಲಿ ಶೇಕಡ 2 ರಷ್ಟು ಮೀಸಲಾತಿ ನೀಡುವ ನಿಯಮಗಳನ್ನು ರೂಪಿಸಲು ಕ್ರಮ ವಹಿಸಲಾಗುತ್ತಿದೆ

**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು)**

- ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 33 ಎಫ್‌ಎಸ್‌ಜಿ 2015 ದಿನಾಂಕ:23.06.2015ರಲ್ಲಿ ಹೊರಡಿಸಿರುವ Karnataka Forest Department Services (Recruitment of Meritorious Sports persons in the category of Deputy Range Forest Officers, Forest Guards and Forest Watchers) (Special) Rules, 2015 ರನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 179 ಎಫ್‌ಇಜಿ 2015, ದಿನಾಂಕ:10.11.2017ರಲ್ಲಿ ಹೊರಡಿಸಿರುವ Karnataka Forest Department Services [Recruitment of Meritorious Sports persons in the category of Deputy Range Forest Officers, Forest Guards and Forest Watchers (Special) Rules, 2017 ರನ್ವಯ ಒಂದು ಬಾರಿಗೆ **ಅನ್ವಯವಾಗುವಂತೆ ವಿವಿಧ ವೃಂದಗಳಲ್ಲಿ ಒಟ್ಟು 104 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ ವಿವರಗಳು ಈ ಕೆಳಕಂಡಂತೆ ಇರುತ್ತದೆ:-**

| ಕ್ರ. ಸಂ | ಪದನಾಮ | ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|
| 1 | ಉಪ ವಲಯ ಅರಣ್ಯಾಧಿಕಾರಿ | 15 |
| 2 | ಅರಣ್ಯ ರಕ್ಷಕ | 72 |
| 3 | ಅರಣ್ಯ ವೀಕ್ಷಕ | 17 |
| **ಒಟ್ಟು** | | **104** |

ರಾಷ್ಟ್ರಮಟ್ಟದ ಅರಣ್ಯ ಇಲಾಖಾ ಕ್ರೀಡಾ ಕೂಟಗಳಲಿ ರಾಜ್ಯ ಅರಣ್ಯ ಇಲಾಖಾ ಕ್ರೀಡಾಪಟುಗಳು ಪಾಲ್ಗೊಂಡು 2024-25ನೇ ಸಾಲಿನಲ್ಲಿ 4ನೇ ಸ್ಥಾನ ಮತ್ತು 2025-26ನೇ ಸಾಲಿನಲ್ಲಿ 3ನೇ ಸ್ಥಾನವನ್ನು ಪಡೆದು ಸಾಧನೆ ಮಾಡಲಾಗಿರುತ್ತದೆ

<table>
<tr><td></td><td></td><td>

**ಒಳಾಡಳಿತ ಇಲಾಖೆ**

ಪೊಲೀಸ್ ಇಲಾಖೆಯಲ್ಲಿ 2021-22ನೇ ಸಾಲಿನಲ್ಲಿ ಕ್ರೀಡಾ ಕೋಟಾದಡಿ **100** ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ನೇಮಕ ಮಾಡಲು ನೇಮಕಾತಿ ಅಧಿಸೂಚನ ಸಂಖ್ಯೆ: **15/ನೇಮಕಾತಿ-2/2021-22, ದಿನಾಂಕ: 31.08.2021** ನೇಮಕಾತಿ ಆದೇಶವನ್ನು ಹೊರಡಿಸಿದ್ದು, ಸದರಿ ಹುದ್ದೆಗಳ ನೇಮಕಾತಿ ವಿವರವು ಕೆಳಕಂಡಂತಿದೆ.

| **ಕ್ರ. ಸಂ** | **ಹುದ್ದೆ** | **ಅಧಿಸೂಚಿಸಲಾದ ಹುದ್ದೆಗಳ ಸಂಖ್ಯೆ** | **ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ** |
|---|---|---|---|
| 1 | ಪಿ.ಸಿ (ಸಿವಿಲ್) | 80 | 67 |
| 2 | ಪಿ.ಎಸ್.ಐ (ಸಿವಿಲ್) | 20 | 13 |

ಸದರಿ ಹುದ್ದೆಗಳನ್ನು ಹೊರತುಪಡಿಸಿ 2021-22ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಕ್ರೀಡಾಕೋಟಾದಡಿ ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ವೃಂದಗಳಲ್ಲಿ ನೇಮಕಾತಿ ಮಾಡಲು 366 ವಿವಿಧ ಹುದ್ದೆಗಳು ಮಂಜುರಾಗಿದ್ದು, ಸದರಿ ಹುದ್ದೆಗಳ ವಿವರವನ್ನು **ಅನುಬಂಧ-3 ರಲ್ಲಿ** ಮತ್ತು ಸದರಿ ಕೋಟಾದಡಿ ನೇಮಕಗೊಂಡವರ ಕ್ರೀಡಾ ಸಾಧನೆಗಳ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಿದೆ.

</td></tr>
<tr><td>ಈ)</td><td>ಸರ್ಕಾರದ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿರುವ ಹುದ್ದೆಗಳ ಭರ್ತಿಗೆ ಕ್ರೀಡಾ ಮೀಸಲಾತಿಯನ್ನು ಕಲ್ಪಿಸಲಾಗಿದೆಯೇ;</td><td>ಅಧಿಸೂಚನೆಯು ನೇರವಾಗಿ ಅನ್ವಯಿಸುವುದಿಲ್ಲ.</td></tr>
<tr><td>ಉ)</td><td>ಕ್ರೀಡಾಪಟುಗಳು ಇಲಾಖೆಗೆ ನೇಮಕಾತಿಯಾದ ನಂತರ ಅವರಿಗೆ ಕ್ರೀಡೆಯಲ್ಲಿ ಸಾಧನೆ ಮಾಡಲು ಸರ್ಕಾರದಿಂದ ಏನೆಲ್ಲಾ ಪ್ರೋತ್ಸಾಹವನ್ನು ನೀಡಲಾಗುತ್ತಿದೆ? (ಮಾಹಿತಿ ನೀಡುವುದು)</td><td>

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**

ರಾಜ್ಯ ಸರ್ಕಾರದ ಕಾರ್ಯನಿರ್ವಹಿಸುತ್ತಿರುವ ಇಲಾಖೆಯಲ್ಲಿ ನೌಕರರಿಗೆ ಕ್ರೀಡಯಲ್ಲಿ ಪ್ರೋತ್ಸಾಹ/ಉತ್ತೇಜನ ನೀಡಲು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

- ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು ಹಾಗೂ ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್‌ಗಳಿಂದ ನಡೆಸಲ್ಪಡುವ ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾದ ರಾಜ್ಯ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲಾಗುವುದು. ಅಲ್ಲದೇ. ಮೇಲೆ ಉಲ್ಲೇಖಿಸಲಾದ ಕ್ರೀಡಾಕೂಟಗಳಿಗೆ ಸಂಬಂಧಿಸಿದಂತೆ ಪೂರ್ವಾನ್ವಯ ತರಬೇತಿ ಶಿಬಿರ ನಡೆಸಿದಲ್ಲಿ ಹಾಗೂ ಅಂತಹ ಶಿಬಿರಗಳಿಗೆ ಸರ್ಕಾರಿ

</td></tr>
</table>

ನೌಕರನು ಭಾಗವಹಿಸಬೇಕಾಗಿ ಬಂದಲ್ಲಿ ಆ ಅವಧಿಗೂ ಸಹ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲಾಗುವುದು.

- ಪಾಟಿಯಾಲದಲ್ಲಿರುವ ರಾಷ್ಟ್ರೀಯ ಸಂಸ್ಥೆಯಲ್ಲಿ ಅಥವಾ ರಾಜಕುಮಾರ ಅಮೃತ್ ಕೌರ್ ಕೋಚಿಂಗ್ ಯೋಜನೆ ಅಥವಾ ತತ್ಸಮಾನವಾದ ಅಖಿಲ ಭಾರತೀಯ ಕೋಚಿಂಗ್ ಅಥವಾ ತರಬೇತಿ ಯೋಜನೆಗಳ ಮೇರೆಗೆ ನಡೆಸಲ್ಪಡುವ ಅಥವಾ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಂದು ಕ್ಯಾಲೆಂಡರ್ ವರ್ಷದಲ್ಲಿ 30 ದಿನಗಳ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲಾಗುವುದು.
- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾದ ಸರ್ಕಾರಿ ನೌಕರರು ಭಾರತ ದೇಶದ ಒಳಗಡೆ ಪ್ರಯಾಣಿಸಿದಾಗ ಅಂತಹ ನೌಕರರಿಗೆ ಪ್ರಥಮ ದರ್ಜೆ ರೈಲ್ವೆ ದರ ಮಂಜೂರು ಮಾಡಲಾಗುವುದು. ಅಂತಾರಾಷ್ಟ್ರೀಯ ಮಹತ್ವವುಳ್ಳ ಕ್ರೀಡಾಕೂಟಗಳು ದೇಶದ ಹೊರಗಡೆ ನಡೆದಾಗ ಮಿತವ್ಯಯ ದರ್ಜೆಯ ವಿಮಾನ ಪ್ರಯಾಣ ದರ ಮಂಜೂರು ಮಾಡಲಾಗುವುದು.

ರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಬಡ್ತಿ ಹಾಗೂ ಅಂತಾರಾಷ್ಟ್ರೀಯ ಮಹತ್ವದ ಕ್ರೀಡಾಕೂಟಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸರ್ಕಾರಿ ನೌಕರರಿಗೆ ಎರಡು ವಿಶೇಷ ವೇತನ ಬಡ್ತಿಯನ್ನು ಒಬ್ಬ ವ್ಯಕ್ತಿಗೆ ಅವನ/ಅವಳ ಪೂರ್ಣ ಸೇವಾವಧಿಯಲ್ಲಿ ಮೂರನ್ನು ಮೀರದಂತೆ ಮಂಜೂರು ಮಾಡಲಾಗುವುದು.

- ಸೆಂಟ್ರಲ್ ಸಿವಿಲ್ ಸರ್ವೀಸಸ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಬೋರ್ಡ್‌ನಿಂದ ನಡೆಸಲ್ಪಡುವ ರಾಷ್ಟ್ರೀಯ ಮಹತ್ವದಿಂದ ಕೂಡಿದ ಅಖಿಲ ಭಾರತ ನಾಗರಿಕ ಸೇವಾ ಟೂರ್ನಮೆಂಟ್‌ಗಳಿಗೆ ಆಯ್ಕೆಯಾಗಿ ಸದರಿ ಕ್ರೀಡಾಕೂಟಗಳಲ್ಲಿ ಕ್ರೀಡಾಪಟುವಾಗಿ ಸಕ್ರಿಯವಾಗಿ ಭಾಗವಹಿಸುವ ರಾಜ್ಯ ಸರ್ಕಾರಿ ನೌಕರರಿಗೆ ಕ್ರೀಡಾಕೂಟದ ಅವಧಿಗೆ ವಿಶೇಷ ಸಾಂದರ್ಭಿಕ ರಜೆ ಮತ್ತು ಪ್ರಯಾಣ ಭತ್ಯೆಯನ್ನು ಮಂಜೂರು ಮಾಡಲಾಗುವುದು.

ಅಲ್ಲದೇ, ಮೇಲ್ಕಂಡ ಸೌಲಭ್ಯಗಳೊಂದಿಗೆ ಕ್ರೀಡಾ ಸಾಧನೆ ಆಧರಿಸಿ, ಇಲಾಖೆಯ ನಗದು ಪುರಸ್ಕಾರ ಸೌಲಭ್ಯಗಳನ್ನು ಪಡೆಯಲು ಅವಕಾಶವಿರುತ್ತದೆ. ವಿವರ ಇಂತಿದೆ.

| ಕ್ರ. ಸಂ | ವಿವರ | ಚಿನ್ನದ ಪದಕ | ಬೆಳ್ಳಿಯ ಪದಕ | ಕಂಚಿನ ಪದಕ |
|---|---|---|---|---|
| 1. | ಒಲಂಪಿಕ್ಸ್ | 6.00 ಕೋಟಿ | 4.00 ಕೋಟಿ | 3.00 ಕೋಟಿ |
| 2. | ಏಷಿಯನ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 3. | ಕಾಮನ್ವೆಲ್ತ್ ಗೇಮ್ಸ್ | 35.00 ಲಕ್ಷ | 25.00 ಲಕ್ಷ | 15.00 ಲಕ್ಷ |
| 4. | ವಿಶ್ವ ಕಪ್/ಚಾಂಪಿಯನ್‌ಶಿಪ್ | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 5. | ನ್ಯಾಷನಲ್ ಗೇಮ್ಸ್ | 5.00 ಲಕ್ಷ | 3.00 ಲಕ್ಷ | 2.00 ಲಕ್ಷ |
| 6. | ನ್ಯಾಷನಲ್ ಚಾಂಪಿಯನ್ ಶಿಪ್(ಒಲಂಪಿಕ್ ಕ್ರೀಡೆಗಳಿಗೆ) | 2.00 ಲಕ್ಷ | 1.00 ಲಕ್ಷ | 50.000 |
| 7. | ಜೂನಿಯರ್ ನ್ಯಾಷನಲ್ ಒಲಂಪಿಕ್ ಕ್ರೀಡೆಗಳಿಗೆ) | 50,000 | 25,000 | 15,000 |
| 8. | ಸಬ್ ಜೂನಿಯರ್ ನ್ಯಾಷಲ್ ಒಲಂಪಿಕ್ ಕ್ರೀಡೆಗಳಿಗೆ | 25,000 | 15,000 | 10,000 |

**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು)**

ರಾಷ್ಟ್ರಮಟ್ಟದ ಅರಣ್ಯ ಕ್ರೀಡಾ ಕೂಟದಲ್ಲಿ ಪದಕ ಪಡೆದ ಕ್ರೀಡಾ ಪಟುಗಳಿಗೆ ಹಾಗೂ ಮುಂಬರುವ ರಾಷ್ಟ್ರ ಮಟ್ಟದ ಅರಣ್ಯ ಕ್ರೀಡಾಕೂಟ (National Forest Sports Meet)ಗಳಲ್ಲಿ ಪದಕ ಪಡೆಯುವ ವಿಜೇತ ಕ್ರೀಡಾಪಟುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 17 ಎಫ್‌ಎಫಿ 2025, ದಿನಾಂಕ: 30.05.2025ರನ್ವಯ ನಗದು ಬಹುಮಾನ ಮೊತ್ತವನ್ನು ವಿತರಿಸಲಾಗುತ್ತಿದೆ.

**ಒಳಾಡಳಿತ ಇಲಾಖೆ:**

ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ 66/ಕ್ರೀಡೆ/2016-17, ದಿನಾಂಕ: 24-01-2025 ರಲ್ಲಿ ವಿವಿಧ ಕ್ರೀಡೆಗಳಿಗೆ ವಲಯಾಧಿಕಾರಿಗಳನ್ನು ನೇಮಿಸಿ, ಸದರಿ ವಲಯಾಧಿಕಾರಿಯವರುಗಳಿಗೆ ಸಹಾಯಕ ಪೋಷಕರನ್ನಾಗಿ ಆಯಾ ವಲಯನ್ನೊಳಗೊಂಡ ಘಟಕಾಧಿಕಾರಿಗಳನ್ನು ಸಹಾಯಕ ಪೋಷಕರನ್ನಾಗಿ ನೇಮಿಸಿ, ಕ್ರೀಡಾ ಪೋಷಕರು ಹಾಗೂ ಸಹಾಯಕರು ಅನುಸರಿಸಬೇಕಾದ ಕ್ರಮಗಳ ಕುರಿತಂತೆ

| | | |
|---|---|---|
| | | ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ. **(ಅನುಬಂಧ-5ರಲ್ಲಿ ಒದಗಿಸಿದೆ)** ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಕ್ರೀಡಾಕೂಟ ನಡೆಯುವ ಒಂದು ತಿಂಗಳ ಪೂರ್ವದಲ್ಲಿ ಒಬ್ಬರಿಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/41/ಇಎಫ್‌ಎಸ್/2025, ದಿನಾಂಕ: 23-06-2025 ರನ್ವಯ ರೂ.9,000/-ಗಳ ಪೌಷ್ಠಿಕ ಆಹಾರ ಭತ್ಯೆ ಮತ್ತು ಪ್ರವೇಶ ಧನವನ್ನು ಮಂಜೂರು ಮಾಡಿಕೊಡಲಾಗುತ್ತಿದೆ. ಕ್ರೀಡಾಕೂಟ ನಡೆಯುವ ರಾಜ್ಯಕ್ಕೆ ಹೋಗಿ ಬರಲು ಸೂಕ್ತ ಪ್ರಯಾಣದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಇನ್ನೂ ಹೆಚ್ಚಿನ ಪದಕಗಳನ್ನು ಗಳಿಸುವ ನಿಟ್ಟಿನಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗಳಿಸುವ ಕ್ರೀಡಾಪಟುಗಳಿಗೆ ನಗದು ಬಹುಮಾನವನ್ನು ಹೆಚ್ಚಿಸುವಂತೆ ಕೋರಿ ಪೊಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ: ಪಿ&ಸಿ(2)04/2024-25 ದಿನಾಂಕ: 29.04.2024 ಮತ್ತು 11.12.2025 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ ಅಖಿಲ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (DYES) ಯಲ್ಲಿರುವ ತರಬೇತುದಾರರಿಂದ ತರಬೇತಿಯನ್ನು ನೀಡಲಾಗುತ್ತಿದೆ. |

**ಸಿಆಸುಇ 35 ಸೆನೆನಿ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ